## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ

ಸಿ.ಸಿ ನಂ. 21/2022 ಸಿ.ಡಬ್ಲ್ಯೂ -1

ಪಿ.ಡಬ್ಲ್ಯೂ -3

ಹೆಸರು : ಶಿವಕುಮಾರ

ತಂದೆ:ಗಂಡ : ಚಂದ್ರಶಾ

ವಯಸ್ಸು : 65 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ : ಬೆಟಜೇವರ್ಗಿ ದಿನಾಂಕ:15.11.2023

ಸತ್ಯ ಪ್ರತಿಜ್ಞೆಯ ಮೇರೆಗೆ.

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ :**

ಆರೋಪಿ ನನ್ನ ಚಿಕ್ಕಮನ ತಮ್ಮ. ಚಾಸಾ-4 ನನ್ನ ತಂದೆ, ಚಾಸಾ-5 ನನ್ನ ಹೆಂಡತಿ, ಚಾಸಾ-7 ನನ್ನ ತಮ್ಮನ ಹೆಂಡತಿ, ಚಾಸಾ-8 ನನ್ನ ತಾಯಿ, ಚಾಸಾ-2, 3 ರವರ ಪರಿಚಯ ಇರುತ್ತದೆ. ನನ್ನ ತಂದೆ ಸಂಜೆ 5.00 ಗಂಟೆಗೆ ಅಂಬಾಭವಾನಿ ಗುಡಿಯ ಕಟ್ಟೆ ಹತ್ತಿರ ಕುಳಿತಿದ್ದಾಗ ಆರೋಪಿ ಬಳಿ ಇದ್ದ ಕಟ್ಟಿಗೆಯಿಂದ ಹೊಡೆದಿರುತ್ತಾನೆ ಹಾಗೂ ಚಾಸಾ-6 ರವರ ಬಳಿ ಇದ್ದ ಕಟ್ಟಿಗೆಯನ್ನು ತೆಗೆದು ಹೊಡೆದಿರುತ್ತಾನೆ. ಜಗಳವನ್ನು ನೋಡಿ ಚಾಸಾ-5, 6, 8 ರವರ ಬಿಡಿಸಿರುತ್ತಾರೆ. ಜಗಳವಾದ ನಂತರ ಒಂದು ಜೀಪಿನಲ್ಲಿ ನನ್ನ ತಂದೆಗೆ ಆಸ್ಪತ್ರೆಗೆ 27ನೇ ತಾರಿಖಿನಂದು 2021 ರಲ್ಲಿ ಕರೆದುಕೊಂಡು ಹೋಗಿದ್ದೇವು. ಆಸ್ಪತ್ರೆಯಲ್ಲಿ ದಾಖಲಿಸಿದೇವು. ಆಸ್ಪತ್ರೆಯಿಂದ ಬಂದು 5ನೇ ತಾರಿಖಿನಂದು ದೂರನ್ನು ನೀಡಿರುತ್ತೇನೆ.

ಸಾಕ್ಷಿಗೆ ಈಗ ಅವರು ನೀಡಿದ ದೂರನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ದೂರನ್ನು ನಿಪಿ-2, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಒಂದು ಕಟ್ಟಿಗೆಯನ್ನು ತೋರಿಸಿ ಅದನ್ನು ಗುರುತಿಸಿದ್ದು ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು : ಸ.ಸ.ಅ. ವಕೀಲರಿಂದ.**

ನನ್ನ ಚಿಕ್ಕಮ್ಮ ಸರಸ್ವತಿಯವರಿಗೂ, ನನ್ನ ತಂದೆಯವರಿಗೂ ಬಾಯಿ ಮಾತು ಆಗಿ ವೈಮನಸ್ಸು ಇಟ್ಟುಕೊಂಡಿದ್ದರು ಎಂದರೆ ಸರಿ. ದಿ.**27.06.2021** ರಂದು ಸದರಿ ಘಟನೆ ಅಯಿತು ಎಂದರೆ ಸರಿ. ಆರೋಪಿ ಚಾಸಾ-**4** ರವರಿಗೆ ಜೀವ ಸಹಿತ ಬಿಡುವುದಿಲ್ಲ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. ಚಾಸಡಾ-**7** ರವರು ಜಗಳವನ್ನು ನೋಡಿ ಬಿಡಿಸಿರುತಾರೆ ಎಂದರೆ ಸರಿ. ಚಾಸಾ-**4** ರವರಿಗೆ ಎರಡೂ ಕಾಲಿಗೂ ಗುಭೀರ ಗಾಯ ಆಗಿರುತ್ತದೆ ಎಂದರೆ ಸರಿ. ನರೋಣಾ ಆಸ್ಪತ್ರೆಯಲ್ಲಿ ಉಪಚಾರ ಪಡೆದು ದಿ.**30.06.2021** ರಂದು ಜಿಲ್ಲಾ ಆಸ್ಪತ್ರೆ ಕಲಬುರಗಿಗೆ ಹೋಗಿರುತ್ತೇವೆ

ಎಂದರೆ ಸರಿ. **5** ನೇ ತಾರಿಖಿನಂದು ನನ್ನ ತಂದೆಯವರು ಬಿಡುಗಡ ಆಗಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ ಡಿ.ಎಸ್.ಎನ್. ವಕೀಲರಿಂದ</u>**

ಘಟನೆಯನ್ನು ನಾನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿ. ನನ್ನ ತಂದೆಯವರನ್ನು ಒಂದು ಜೀಪಿನಲ್ಲಿ ಅಸ್ಪತ್ರೆಗೆ ಕರೆದುಕೊಂಡು ಹೋದಾಗ ಸಮಯ 5.00 ಗಂಟೆ ಆಗಿತ್ತು. ನಾನು ಸರ್ಕಾರಿ ಆಸ್ಪತೆರ ಕಲಬುರಗಿಗೆ ಕರೆದುಕೊಂಡು ಹೋಗಿದ್ದೇನು. ನಾನು ಕಲಬುರಗಿಗೆ ಹೋಗುವ ಮೊದಲು ನರೋಣಾ ಆಸ್ಪತ್ರೆಗೆ ಹೋಗಿದ್ದೆ ಹೋದಾಗ ಸಮಯ ರಾತ್ರಿ 8.00 ಗಂಟೆ ಅಗಿತ್ತು. ದಿ.27 ರಂದು ನರೋಣಾ ಆಸ್ಪತ್ರೆಗೆ ಹೋಗಿದ್ದೇವು. ನನ್ನ ತಂದೆ ಮೂಕರಿದ್ದ ಕಾರಣ ಯಾವ ಕಾರಣಕ್ಕೆ ವೈಮನಸ್ಸು ಇತ್ತು ಎಂದು ನನಗೆ ಗೊತ್ತಿಲ್ಲ. ಆರೊಪಿ 2 ಬಡಿಗೆಯಿಂದ ಚಾಸಾ-4 ರವರಿಗೆ ಹೊಡೆದಿರುತ್ತಾನೆ. ಕುಡಗೋಲು ಕಟ್ಟಿಗೆ ಸಾಮಾನ್ಯವಾಗಿ ಮೃದುವಾಗಿರುತ್ತದೆ ಎಂದರೆ ಸರಿ. ಕುಡಗೋಲು ಮು.ಮಾ.1 ಅಲ್ಲ ಎಂದರೆ ಸರಿ.

ನನ್ನ ತಂದೆ ಸಂಜೆ 5.00 ಗಂಟೆಗೆ ಅಂಬಾಭವಾನಿ ಗುಡಿಯ ಕಟ್ಟೆ ಹತ್ತಿರ ಕುಳಿತಿದ್ದಾಗ ಆರೋಪಿ ಬಳಿ ಇದ್ದ ಕಟ್ಟಿಗೆಯಿಂದ ಹೊಡೆದಿರುತ್ತಾನೆ ಹಾಗೂ ಚಾಸಾ-6 ರವರ ಬಳಿ ಇದ್ದ ಕಟ್ಟಿಗೆಯನ್ನು ತೆಗೆದು ಹೊಡೆದಿರುತ್ತಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜಗಳವನ್ನು ನೋಡಿ ಚಾಸಾ-5, 6, 8 ರವರ ಬಿಡಿಸಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜಗಳವಾದ ನಂತರ ಒಂದು ಜೀಪಿನಲ್ಲಿ ನನ್ನ ತಂದೆಗೆ ಆಸ್ಪತ್ರೆಗೆ 27 ನೇ ತಾರಿಖಿನಂದು 2021 ರಲ್ಲಿ ಕರೆದುಕೊಂಡು ಹೋಗಿದ್ದೇವು. ಆಸ್ಪತ್ರೆಯಲ್ಲಿ ದಾಖಲಿಸಿದೇವು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯಿಂದ ಬಂದು 5 ನೇ ತಾರಿಖಿನಂದು ದೂರನ್ನು ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಚಿಕ್ಕಮ್ಮ ಸರಸ್ವತಿಯವರಿಗೂ, ನನ್ನ ತಂದೆಯವರಿಗೂ ಬಾಯಿ ಮಾತು ಆಗಿ ವೈಮನಸ್ಸು ಇಟ್ಟುಕೊಂಡಿದ್ದರು ಎಂದರೆ ಸರಿಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿ.**27.06.2021** ರಂದು ಸದರಿ ಘಟನೆ ಅಯಿತು ಎಂದರೆ ಸರಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಚಾಸಾ-**4** ರವರಿಗೆ ಜೀವ ಸಹಿತ ಬಿಡುವುದಿಲ್ಲ ಎಂದು ಅವಾಚ್ಯ ಶಬ್ದಗಳಿಂದೆ ಬೈದಿರುತ್ತಾರೆ ಎಂದರೆ ಸರಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-**7** ರವರು ಜಗಳವನ್ನು ನೋಡಿ ಬಿಡಿಸಿರುತಾರೆ ಎಂದರೆ ಸರಿಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-**4** ರವರಿಗೆ ಎರಡೂ ಕಾಲಿಗೂ ಗುಭೀರ ಗಾಯ ಆಗಿರುತ್ತದೆ ಎಂದರೆ ಸರಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನರೋಣಾ ಆಸ್ಪತ್ರೆಯಲ್ಲಿ ಉಪಚಾರ ಪಡೆದು ದಿ.**30.06.2021** ರಂದು ಜಿಲ್ಲಾ ಆಸ್ಪತ್ರೆ ಕಲಬುರಗಿಗೆ ಹೋಗಿರುತ್ತೇವೆ ಎಂದರೆ ಸರಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. **5** ನೇ ತಾರಿಖಿನಂದು ನನ್ನ ತಂದೆಯವರು ಬಿಡುಗಡ ಆಗಿರುತ್ತಾರೆ ಎಂದರೆ ಸರಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.